ಕರಡು

# ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯೀ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 31 – 03 –2022ರ ನಡವಳಿಗಳು

**ವಿಷಯದ ಸಂಖ್ಯೆ:621/2021–22**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಸಾರ್ವಜನಿಕ ಬೀದಿ ದೀಪಗಳಲ್ಲಿ ಉಳಿತಾಯ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ನಅಇ 453 MNY 2018 ದಿ:23/02/2019ರ ಪ್ರಕಾರ M/S Shapoorji Pallonji, Samudra Electronics And SMS Infrastruture ರವರ ಒಕ್ಕೂಟಕ್ಕೆ ದಿ:23/02/2019 ರಂದು ಕಾಮಗಾರಿ ನೀಡಲಾಗಿರುತ್ತದೆ.

ಈ ಯೋಜನೆಯ ಗುತ್ತಿಗೆಯಲ್ಲಿ ನಿಗಧಿತ ಕಾರ್ಯಸಾಧನೆ ಸಾಧ್ಯವಾಗದೇ ಪ್ರಗತಿ ಕುಂಠಿತವಾದ ಕಾರಣ ಹಾಗೂ ಅನುಷ್ಠಾನಗೊಳಿಸುವುದರಲ್ಲಿ ಲೋಪದೋಶಗಳ ಒಸ್ಸೆಲೆಯಲ್ಲಿ ಗುತ್ತಿಗೆ ಕರಾರಿನ ಕ್ಲಾಸ್ 22 (e) ಪ್ರಕಾರ ಮಾನ್ಯ ಮುಖ್ಯ ಆಯುಕ್ತರು Termination Notice ಸಂಖ್ಯೆ: ಮು.ಆ/ಬಿ.ಆರ್/225/21–22 ದಿ:03/12/2021 ರಲ್ಲಿ ಗುತ್ತಿಗೆಯನ್ನು ರದ್ದುಗೊಳಿಸಿರುತ್ತಾರೆ. ಅದರಂತೆ ಈ ಯೋಜನೆ ಚಾಲ್ತಿಯಲ್ಲಿದ್ದುದರಿಂದ ಹೊಸ ಬೀದಿ ದೀಪಗಳನ್ನು ಅಳವಡಿಸದೆ ಇರುವುದರಿಂದ ಹಾಗೂ ಹೊಸ ಬೀದಿ ದೀಪಗಳ ಅಳವಡಿಕೆಗೆ ಹೆಚ್ಚಿನ ಬೇಡಿಕೆ ಹಾಗೂ ಸಾರ್ವಜನಿಕ ಸುರಕ್ಷಿತ ಭದ್ರತೆ ದೃಷ್ಟಿಯಿಂದ ಮತ್ತು ರಾತ್ರಿ ವೇಳೆಯಲ್ಲಿ ಅಪರಾಧಿಕ ಪ್ರಕರಣಗಳನ್ನು ತಡೆಯಲು ಬೀದಿ ದೀಪಗಳನ್ನು ಅಳವಡಿಸುವುದು ಬಹು ಮುಖ್ಯವೆಂದು ಸ್ಥಳೀಯ ಜನಪ್ರತಿನಿಧಿಗಳು ಮತ್ತು ಶಾಸಕರುಗಳು ಒತ್ತಾಯ ಮಾಡಿರುತ್ತಾರೆ ಹಾಗೂ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಹೊಸದಾಗಿ ಬೀದಿ ದೀಪಗಳನ್ನು ತುರ್ತಾಗಿ ಅಳವಡಿಸಬೇಕಿರುತ್ತದೆ.

ಮುಂದುವರೆದು ದಿನಾಂಕ:02/12/2021 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ಸಭೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನೀಡಿರುವ ಸೂಚನೆಗಳಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿ ದೀಪಗಳಿಗೆ ಸಂಬಂಧಿಸಿದಂತೆ ಕಾಮಗಾರಿಯನ್ನು ಕೈಗೊಳ್ಳಲು ಕೂಡಲೇ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಜನವರಿ 2022ರ ಅಂತ್ಯದೊಳಗೆ ಅನುಷ್ಠಾನಗೊಳಿಸಲು ಕ್ರಮವಹಿಸಲು ಮಾನ್ಯ ಮುಖ್ಯ ಆಯುಕ್ತರಿಗೆ ಆದೇಶಿಸಿರುತ್ತಾರೆ. ಈ ವಿಷಯದ ಬಗ್ಗೆ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: ಬಿಬಿಎಂಪಿ/ಆಕಾ/ಪಿಎಸ್‌ಆರ್/235/2021–22 ದಿ:03/01/2022 ಪ್ರಕಾರ ಆಯುಕ್ತರು ಆದೇಶಿಸಿರುತ್ತಾರೆ. ಅದರಂತೆ ಪಾಲಿಕೆಯ ದಕ್ಷಿಣ ವಿಭಾಗದ ಬಸವನಗುಡಿ ವಿಧಾನಸಭಾ ಕ್ಷೇತ್ರದ ವಿವಿಧ ಪ್ರದೇಶದ ಖಾಲಿ ಕಂಬಗಳಿಗೆ ಬೀದಿ ದೀಪಗಳನ್ನು ಅಳವಡಿಸಲು ಈ ಕೆಳಗಿನಂತೆ ಕಾಮಗಾರಿಯನ್ನು ನಿರ್ವಹಿಸಲು ಕೈಗೊಳ್ಳಲಾಗಿರುತ್ತದೆ.

| | |
|---|---|
| **Name of the work:** | **Providing LED street light fittings with connected accessories in ward no- 16, 17, 37 & releasing of existing sodium vapour lights from ward no- 16, 17, 37 & refixing at ward no 73 and 129 under RR Nagar Zone.** (BBMP/2021-22/EL/Work-Indent:49808) |

1. ಈ ಮೇಲಿನ ಪಟ್ಟಿಯಲ್ಲಿರುವ ಕಾಮಗಾರಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ತಾಂತ್ರಿಕ ಮಂಜೂರಾತಿ ಹಾಗೂ ಕರಡು ಟೆಂಡರ್ ಪ್ರತಿಯ ಅನುಮೋದನೆ
2. ಈ ಕಾಮಗಾರಿಯನ್ನು ತುರ್ತಾಗಿ ಅನುಷ್ಠಾನಗೊಳಿಸುವ ಅವಶ್ಯಕತೆ ಇರುವುದರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲು ಅನುಮೋದನೆ
3. ಈ ಕಾಮಗಾರಿಗೆ ಕಾರ್ಯಾದೇಶ ನೀಡುವ ಮೊದಲು ಘಟನೋತ್ತರ ಆಡಳಿತಾತ್ಮಕ ಮಂಜೂರಾತಿ ಮತ್ತು ಜಾಬ್ ಸಂಖ್ಯೆ ಪಡೆಯಲು ಅನುಮೋದನೆ
4. ಚಾಲ್ತಿಯಲ್ಲಿರುವ ಪಾಲಿಕೆಯ ನಿಯಮಗಳ ಪ್ರಕಾರ 1.00 ಕೋಟಿ ಮೀರಿದ ಕಾಮಗಾರಿಗಳಿಗೆ ಡಿಪಿಆರ್ ಪಡೆಯಬೇಕಾಗಿದ್ದು ಡಿಪಿಆರ್ ಪಡೆಯಲು ಹೆಚ್ಚಿನ ಕಾಲಾವಕಾಶದ ಅಗತ್ಯವಿದ್ದು ಜನವರಿ 2022ರೊಳಗೆ ಅಗತ್ಯ ಕ್ರಮವಹಿಸಲು ವಿಳಂಬವಾಗುವ ಸಂಭವವಿರುವುದರಿಂದ ಹಾಗೂ ಈ ಕಾಮಗಾರಿಯ ಅಂದಾಜುಪಟ್ಟಿಯನ್ನು ಸಂಬಂಧಪಟ್ಟ ವಿದ್ಯುತ್ ಅಭಿಯಂತರರುಗಳು ಸ್ಥಳ ಪರಿಶೀಲನೆ ಮಾಡಿ ತಯಾರಿಸಿರುವುದರಿಂದ ಈ ಕಾಮಗಾರಿಗಳಿಗೆ ಡಿ.ಪಿ.ಆರ್ ಪಡೆಯದೇ ಗುಣಮಟ್ಟ ಕಾಯ್ದುಕೊಳ್ಳಲು 3rd Party Consultants(PMC) ನೇಮಕ ಮಾಡಿಕೊಳ್ಳಲು ಹಾಗೂ ಈ ಕಾಮಗಾರಿಗೆ ಅನುದಾನ ನಿರೀಕ್ಷಿಸಿ ಕೈಗೊಳ್ಳಲು ಮೇಲ್ಕಂಡ ಅಂಶಗಳಿಗೆ ಮಾನ್ಯ ಮುಖ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ.

ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:2/1/2022ರಂದು ಬೆಂಗಳೂರು ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿ ದೀಪಗಳಿಗೆ ಸಂಬಂಧಿಸಿದಂತೆ ವಾರ್ಡ್ ರಸ್ತೆಗಳಲ್ಲಿ ಮತ್ತು ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳಲ್ಲಿ ವಿದ್ಯುತ್ ದೀಪ ಇಲ್ಲದೇ ಇರುವ ಕಂಬಗಳಿಗೆ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಕ್ಷಿಪ್ರಗತಿಯಲ್ಲಿ ಕೈಗೊಳ್ಳಲು ಮಾನ್ಯ ಮುಖ್ಯ ಮಂತ್ರಿಗಳು ಆದೇಶಿಸಿರುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಆಯುಕ್ತರು ವಿವಿಧ ಇಲಾಖೆಯ ಮುಖ್ಯಸ್ಥರಿಗೆ ದಿನಾಂಕ: 05/01/2022 ರಂದು 11.00 ಗಂಟೆಗೆ ಸಭೆ ನಡೆಸಿ ಪಾಲಿಕೆ ವ್ಯಾಪ್ತಿಯಲ್ಲಿ ಅತ್ಯಂತ ಅವಶ್ಯವಿರುವ ಬೀದಿ ದೀಪಗಳನ್ನು ಅಳವಡಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಕೆಳಗಿನಂತೆ ಆದೇಶಿಸಿರುತ್ತಾರೆ.

1. ಪಾಲಿಕೆಯ ರಾ.ರಾ.ನಗರ ವಲಯ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಕ್ಷೇತ್ರಗಳಡಿಯಲ್ಲಿನ ಪ್ರದೇಶಗಳಲ್ಲಿ ಖಾಲಿ ಇರುವ ವಿದ್ಯುತ್ ಕಂಬಗಳಿಗೆ ಬೀದಿ ದೀಪಗಳನ್ನು ಅಳವಡಿಸಲು ವಿಸ್ತೃತ ಅಂದಾಜುಪಟ್ಟಿಯನ್ನು ತಯಾರಿಸಿ ಪ್ರಧಾನ ಅಭಿಯಂತರರ ಕಛೇರಿಗೆ ಅನುಮೋದನೆಗೆ ಸಲ್ಲಿಸುವುದು.
2. ಸದರಿ ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾಮಗಾರಿಗಳ ಪೈಕಿ 100.00 ಲಕ್ಷಗಳಿಗಿಂತ ಕಡಿಮೆ ಇರುವ ಕಾಮಗಾರಿಗಳನ್ನು ಒಂದುಗೂಡಿಸಿ ಕಾಮಗಾರಿಯ ಅಂದಾಜುಪಟ್ಟಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆದು ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವುದು.
3. ವಿವಿಧ ರಸ್ತೆಗಳಲ್ಲಿ ವಿದ್ಯುತ್ ದೀಪಗಳು ಇಲ್ಲದೆ ಇರುವ ಕಂಬಗಳಿಗೆ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಅವಶ್ಯವಿರುವ ಅನುದಾನವನ್ನು ಪಾಲಿಕೆಯ ಆಯವ್ಯಯದಲ್ಲಿ ಮರುಹೊಂದಾಣಿಕೆಯ ಮೂಲಕ ಒದಗಿಸಲು ಕ್ರಮವಹಿಸುವುದು.
4. ಪ್ರಸ್ತಾಪಿತ ಕಾಮಗಾರಿಗಳಿಗೆ ವಲಯ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಸ್ಥಳ ಪರಿಶೀಲಿಸಿ ಅಗತ್ಯತೆಗೆ ಅನುಗುಣವಾಗಿ ತಯಾರಿಸಿ ಸಲ್ಲಿಸಿರುವ ಅಂದಾಜು ಪಟ್ಟಿಗಳನ್ನು ಪರಿಗಣಿಸಿಕೊಂಡು, ಡಿಪಿಆರ್ ಪಡೆಯದೇ, ಕ್ರಿಯಾಯೋಜನೆ ಅನುಮೋದನೆ, ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ, ಅವಶ್ಯವಿರುವ ತಾಂತ್ರಿಕ ಮಂಜೂರಾತಿ ಮತ್ತು ಡಿಟಿಎಸ್ ಅನುಮೋದನೆ ನೀಡುವುದು ಹಾಗೂ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಯ ಟೆಂಡರ್ ಚಟುವಟಿಕೆಗಳನ್ನು ಈ ಕೆಳಗೆ ನಿಗಧಿ ಪಡಿಸಿರುವ ಕಾಲಪಟ್ಟಿಯ ಅನುಸಾರ ಕ್ರಮವಹಿಸಲು ಸಹಾ ಆದೇಶಿಸಿರುತ್ತಾರೆ.

- ಟೆಂಡರ್ ಪ್ರಕಟಣೆ ದಿನಾಂಕ: 28/01/2022
- ಟೆಂಡರ್ ದಸ್ತಾವೇಜು ಅಪ್‌ಲೋಡ್: 29/01/2022
- ಟೆಂಡರ್ ಸಲ್ಲಿಸಲುಕೊನೆಯ ದಿನಾಂಕ: 19/01/2022
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21/01/2022

- ತಾಂತ್ರಿಕ ಮೌಲ್ಯಮಾಪನ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ:21/01/2022
- ಕಾಮಗಾರಿಯನ್ನು ಪ್ರಾರಂಭಿಸ ಬೇಕಾದ ದಿನಾಂಕ: 24/02/2022

ಮಾನ್ಯ ಮುಖ್ಯ ಮಂತ್ರಿಗಳ ಆದೇಶದಂತೆ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ 45 ದಿನಗಳ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಮಾನ್ಯ ಮುಖ್ಯ ಆಯುಕ್ತರವರು ಮೇಲ್ಕಂಡಂತೆ ಆದೇಶಿಸಿರುತ್ತಾರೆ.

ದಿನಾಂಕ 12/01/2022 ರಂದು ಪೂರ್ವಾಹ್ನ 11.30 ಗಂಟೆಗೆ ಮಾನ್ಯ ಮುಖ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಪ್ರಧಾನ ಅಭಿಯಂತರರು, ಅಧೀಕ್ಷಕ ಅಭಿಯಂತರರು ಹಾಗೂ ಎಲ್ಲಾ ವಲಯದ ಕಾರ್ಯಪಾಲಕ ಅಭಿಯಂತರರ ಉಪಸ್ಥಿತಿಯಲ್ಲಿ ಹಾಗೂ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅವಶ್ಯವಿರುವ ಹೊಸ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗೆ ಪ್ರೀ–ಬಿಡ್ ಸಂಬಂಧ ಸಭೆಯನ್ನು ನಡೆಸಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಪ್ರಧಾನ ಅಭಿಯಂತರರ ಸಂಖ್ಯೆ: BBMP/EIC/TS/60/21-22 Dtd:05-01-2022 ರಂತೆ ತಾಂತ್ರಿಕ ಅನುಮೋದನೆ ಹಾಗೂ ಡಿ.ಟಿ.ಎಸ್ ಅನುಮೋದನೆ ನೀಡಿರುವ ಮೇರೆಗೆ ದಿ:06/01/2022 ರಂದು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್ ಸಂಬಂಧ ಮಾನ್ಯ ತೋಟಗಾರಿಕೆ ಸಚಿವರು ಮತ್ತು ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು ತಮ್ಮ ಪತ್ರ ಸಂಖ್ಯೆ: MHPP&S/H.O.268/2021, Dtd:10-01-2021 ರಲ್ಲಿ ಮಾನ್ಯ ಮುಖ್ಯ ಆಯುಕ್ತರು ರವರಿಗೆ ವಿಳಾಸಿಸಿ ಪ್ರಸ್ತುತ ಈ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಆಹ್ವಾನಿಸಿರುವ ಟೆಂಡರ್‌ನಲ್ಲಿ ಅವಕಾಶ ಕಲ್ಪಿಸಿರುವ ಬೀದಿ ದೀಪಗಳಿಗಿಂತ ಹೆಚ್ಚುವರಿ ಸುಮಾರು 2000 ಸಂಖ್ಯೆ ಬೀದಿ ದೀಪಗಳ ಅಗತ್ಯತೆ ಇರುವುದಾಗಿ ಕಾರ್ಯಪಾಲಕ ಅಭಿಯಂತರರು (ರಾ.ರಾ.ನಗರ) ರವರು ತಿಳಿಸಿರುತ್ತಾರೆ. ಆದ್ದರಿಂದ ಈ ವಿಧಾನಸಭಾ ಕ್ಷೇತ್ರದ ಸಾರ್ವಜನಿಕರ ಸುರಕ್ಷತೆ ಹಿತದೃಷ್ಟಿಯಿಂದ ಸಮರ್ಪಕ ಬೀದಿ ದೀಪಗಳ ವ್ಯವಸ್ಥೆಯನ್ನು ಕಲ್ಪಿಸಲು ವಾಸ್ತವ ಅಗತ್ಯತೆ ಅನುಸಾರ ಖಾಲಿ ಕಂಬಗಳ ಮತ್ತು ಕಂಬ ಇಲ್ಲದ ಜಾಗಗಳ ಸಮೀಕ್ಷೆ ನಡೆಸಿ ನೈಜ ಅಗತ್ಯತೆ ಮೇರೆಗೆ ಟೆಂಡರ್ ಅಹ್ವಾನಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಪ್ರಸ್ತುತ ರಾ.ರಾ.ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಒಟ್ಟು 9 ವಾರ್ಡ್‌ಗಳಲ್ಲಿ ಬೀದಿ ದೀಪಗಳ ಅಳವಡಿಕೆಗಾಗಿ ಅಹ್ವಾನಿಸಿರುವ ಟೆಂಡರ್‌ನ್ನು ತಾತ್ಕಾಲಿಕವಾಗಿ ರದ್ದುಪಡಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಕೋರಿರುವ ಮೇರೆಗೆ ಸಕ್ಷಮ ಪ್ರಾಧಿಕಾರದ ಆದೇಶದಂತೆ ಟೆಂಡರ್ ಪ್ರಕಟಣೆ ಸಂಖ್ಯೆ:EE/ELE/RRN/TEND/04/2021-22, Dated:06-01-2022 ರಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳ 5 ಕಾಮಗಾರಿಗಳ ಟೆಂಡರ್‌ಗಳನ್ನು ದಿನಾಂಕ:11–01–2022 ರಂದು ರದ್ದುಗೊಳಿಸಲಾಗಿರುತ್ತದೆ.

ಮುಂದುವರೆದಂತೆ, ಮಾನ್ಯ ತೋಟಗಾರಿಕೆ ಸಚಿವರು ಮತ್ತು ಶಾಸಕರು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ಶಾಸಕರು ರವರು ತಮ್ಮ ಪತ್ರ ಸಂಖ್ಯೆ:ತೋಯೋಕಾ & ಸಾಂಸ/ಗೃಕ/304/2021 ದಿನಾಂಕ:23–01–2022 ರಲ್ಲಿ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)ರವರ ಕಛೇರಿಯ ಅಭಿಯಂತರರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಸಮೀಕ್ಷೆ ನಡೆಸಿದ್ದು, ಈ ಸಮೀಕ್ಷೆಯಲ್ಲಿ ಒಟ್ಟಾರೆ ಸುಮಾರು 8500 ಸಂಖ್ಯೆಗಳ ಖಾಲಿ ಕಂಬಗಳಿಗೆ ಬೀದಿ ದೀಪಗಳ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾ, ಬೀದಿ ದೀಪಗಳ ಬೆಳಕಿನ ಏಕರೂಪತೆ ಮತ್ತು ಸೌಂದರ್ಯದ ಹಿತದೃಷ್ಟಿಯಿಂದ ಪ್ರಸ್ತುತ 1 ವಾರ್ಡ್‌ನಲ್ಲಿ ಹಾಲಿ ಇರುವ ಮಿಶ್ರ ಎಲ್.ಇ.ಡಿ. ಬೀದಿ ದೀಪಗಳು ಮತ್ತು ಸೋಡಿಯಂ ವೇಪರ್ ಬೀದಿ ದೀಪಗಳನ್ನು ಸ್ಥಳಾಂತರಿಸಿ, ಸಂಪೂರ್ಣವಾಗಿ 1 ವಾರ್ಡ್‌ನಲ್ಲಿ ಏಕರೂಪವಾಗಿ ಸೋಡಿಯಂ ವೇಪರ್ ಬೀದಿ ದೀಪಗಳು ಮತ್ತು ಮತ್ತೊಂದು ವಾರ್ಡ್‌ನಲ್ಲಿ ಸಂಪೂರ್ಣವಾಗಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸಲು, ಅವಶ್ಯವಿರುವ ಕಂಬಗಳನ್ನು ಅಳವಡಿಸಲು ಮತ್ತು ಬೀದಿ ದೀಪಗಳ ಸ್ಥಳಾಂತರಕ್ಕೆ ಸುಮಾರು ರೂ.12.50 ಕೋಟಿಗಳ ಅನುದಾನ ಅವಶ್ಯಕತೆ ಇದ್ದು, ಈ ಕಾಮಗಾರಿಗೆ ಅನುದಾನ ಬಿಡುಗಡೆ

ಮಾಡಿ ಶೀಘ್ರವಾಗಿ ಟೆಂಡರ್ ಅಹ್ವಾನಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಮಾನ್ಯ ಮುಖ್ಯ ಆಯುಕ್ತರು ರವರಿಗೆ ಕೋರಿರುತ್ತಾರೆ.

ಈ ಮೇರೆಗೆ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ 9 ವಾರ್ಡ್‌ಗಳಿಗೆ ಒಟ್ಟು ರೂ.12.50 ಲಕ್ಷಗಳಿಗೆ 4 ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದ್ದು ಮಾನ್ಯ ಮುಖ್ಯ ಆಯುಕ್ತರು ದಿನಾಂಕ:25-01-2022 ರಂದು ಅನುಮೋದಿಸಿರುತ್ತಾರೆ. ಈ ಸಂಬಂಧ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಕಛೇರಿ ಟೆಂಡರ್ ಸಂಖ್ಯೆ:EE/ELE/RRN/TEND/06/2021-22 Dated:25-01-2022 ರಂದು ಟೆಂಡರ್ ಅಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್ "Providing LED street light fittings with connected accessories in ward no- 16, 17, 37 & releasing of existing sodium vapour lights from ward no- 16, 17, 37 & refixing at ward no 73 and 129 under RR Nagar Zone."ನಲ್ಲಿ ಈ ಕೆಳಗಿನ ಒಟ್ಟು 2 ಮಂದಿ ಬಿಡ್‌ದಾರರು ಭಾಗವಹಿಸಿರುತ್ತಾರೆ. ,

1. R V Rohith Prop. M/s kumar Electricals
2. B M Srinivas Prop. M/s Aravinda Electricals

ಸದರಿ ಕಾಮಗಾರಿಯಲ್ಲಿ KW-4 ಪ್ರಕಾರ 2 ಮಂದಿ ಬಿಡ್‌ದಾರರು ಭಾಗವಹಿಸಿದ್ದು, ಸದರಿ ಟೆಂಡರ್‌ನಲ್ಲಿ 1) R V Rohith Prop. M/s kumar Electricals ಮತ್ತು 2) B M Srinivas Prop. M/s Aravinda Electricals ಇಬ್ಬರು ಟೆಂಡರ್‌ದಾರರ ತಾಂತ್ರಿಕ ಬಿಡ್ ಅನ್ನು ಪ್ರಧಾನ ಅಭಿಯಂತರರು ಅನುಮೋದಿಸಿರುವಂತೆ ಆರ್ಥಿಕ ಬಿಡ್ ಅನ್ನು ದಿನಾಂಕ: 24-02-2022 ರಂದು ತೆರೆದಿದ್ದು, ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸ | ಬಿಡ್‌ದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ) | ಮಂಜೂರಾದ / ಚಾಲ್ತಿದರಗಳಿಗೆ(Sanctioned Estimate SR 2019-20)ಶೇಕಡವಾರು |
|---|---|---|---|---|
| 1 | R V Rohith Prop. M/s kumar Electricals | 27554341.00 | 30052215.00 | 9.06% |
| 2 | B M Srinivas Prop. M/s Aravinda Electricals | | 31690777.00 | 15.01% |

ಸದರಿ ರೂ.2,75,54,341.00 ಕಾಮಗಾರಿಯ ಟೆಂಡರ್‌ನಲ್ಲಿ (Indent No: BBMP/2021-22/EL/WORK_INDENT49808) ಇಬ್ಬರು ಬಿಡ್‌ದಾರರಾದ 1) R V Rohith Prop. M/s kumar Electricals & 2) B M Srinivas Prop.M/s Aravinda Electrica| ರವರು ಭಾಗವಹಿಸಿದ್ದು, ಬಿಡ್‌ದಾರರಾದ R V Rohith Prop.M/s kumar Electricals ರವರು ರೂ.30052215.00 ಗಳ ಕಡಿಮೆ ಟೆಂಡರ್ ಮೊತ್ತ ನಮೂದಿಸಿರುತ್ತಾರೆ. ಸದರಿ ಮೊತ್ತವು ಮಂಜೂರಾದ / ಚಾಲ್ತಿ CSR 2019-20 ದರಗಳಿಗೆ ಹೋಲಿಸಿದಾಗ ಶೇ.9.06% ರಷ್ಟು ಹೆಚ್ಚು ದರಗಳನ್ನು ನಮೂದಿಸಿರುತ್ತಾರೆ.

ಸದರಿ ಎಲ್-1 ಬಿಡ್‌ದಾರರು ಶೇ.9.06% ಹೆಚ್ಚು ದರಗಳನ್ನು ನಮೂದಿಸಿರುವುದರಿಂದ ಇವರೊಂದಿಗೆ ದರ ಸಂಧಾನ ನಡೆಸಲಾಗಿ ಇವರು ತಾವು ನಮೂದಿಸಿರುವ ದರಗಳಲ್ಲಿ ಶೇಕಡಾ 0.56% ರಷ್ಟು ದರಗಳನ್ನು ಕಡಿಮೆಗೊಳಿಸಲು ಒಪ್ಪಿ ಲಿಖಿತವಾಗಿ ಒಪ್ಪಿಗೆ ಪತ್ರ ನೀಡಿರುತ್ತಾರೆ.

ಸಂಧಾನದ ನಂತರದರಗಳು ಮತ್ತುಟೆಂಡರ್ ಮೊತ್ತದ ವಿವರಗಳು ಈ ಕೆಳಕಂಡಂತೆಇರುತ್ತದೆ.

| | BEFORE NEGOTIATION | | | AFTER NEGOTIATION | |
|---|---|---|---|---|---|
| ಕ್ರ.ಸ | ತಾಂತ್ರಿಕ ಮೌಲ್ಯ ಮಾಪನದಲ್ಲಿಅರ್ಹರಾದಟೆಂಡರ್ ದಾರರು | ಟೆಂಡರ್‌ದಾರರು ನಮೂದಿಸಿರುವ ದರಗಳು (ರೂಗಳಲ್ಲಿ) | ಮಂಜೂರಾದ / ಚಾಲ್ತಿದರಗಳಿಗೆ ಶೇ% | ದರ ಸಂಧಾನದ ನಂತರಟೆಂಡರ್‌ದಾರರು ನಮೂದಿಸಿರುವ ಮೊತ್ತ (ರೂ) | ಮಂಜೂರಾದ / ಚಾಲ್ತಿದರಗಳಿಗೆಶೇ. |
| 1 | R V Rohith Prop. M/s kumar Electricals | 30052215.00 | 9.06% Above | 29914443.00 | 8.57% Above |

ಎಲ್–1 ಟೆಂಡರ್‌ದಾರರಾದ R V Rohith Prop.M/s kumar Electrical ರವರುದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.2,99,14,443.00(GST ಹೊರತುಪಡಿಸಿ) ಗಳ ಟೆಂಡರ್ ಮೊತ್ತವು ಮಂಜೂರಾದ/ಚಾಲ್ತಿದರಗಳಿಗೆ ಹೋಲಿಸಿದಾಗ ಶೇ.8.57% ಹೆಚ್ಚು ದರಗಳನ್ನು ಅನುಮೋದಿಸಲು ಮಾನ್ಯ ಮುಖ್ಯ ಆಯುಕ್ತರುರವರ ಅಧಿಕಾರ ಪ್ರತ್ಯಾಯೋಜನೆ ಸಂಖ್ಯೆ: ಬಿ12(1)ಪಿಆರ್/394/2021–22, ದಿನಾಂಕ: 18/01/2022 ರಂತೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ಸ್ಥಾಯಿ ಸಮಿತಿಯಾಗಿರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರುತ್ತಾ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯೀ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:22-03-2022ರ ಟಿಪ್ಪಣಿ.

1. ದಿನಾಂಕ:05–01–2022 ರ ಮಾನ್ಯ ಮುಖ್ಯ ಆಯುಕ್ತರುರವರ ಸಭೆ ನಡವಳಿಯಲ್ಲಿ ದಾಖಲಿಸಿರುವಂತೆ ಸದರಿ ಕಾಮಗಾರಿಯ ಅಂದಾಜು ಮೊತ್ತದ ರೂ.325.00 ಲಕ್ಷಗಳ ಅನುದಾನಕ್ಕೆ 2021–22 ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಸೂಕ್ತ ಲೆಕ್ಕಶಿಷೀಕೆ ಅಡಿಯಲ್ಲಿ ಮರು ಹೊಂದಾಣಿಕೆ ಅನುದಾನ ಒದಗಿಸಲು ಅನುಮೋದನೆ.

2. "Providing LED street light fittings with connected accessories in ward no- 16, 17, 37 & releasing of existing sodium vapour lights from ward no- 16, 17, 37 & refixing at ward no 73 and 129 under RR Nagar Zone."ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ.

3. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಟೆಂಡರ್ ಆಹ್ವಾನಿಸಿ ಪೂರ್ಣಗೊಳಿಸಿರುವ ಟೆಂಡರ್ ಪ್ರಕ್ರಿಯೆಗಳ ಕ್ರಮಕ್ಕೆ ಸ್ಥಿರೀಕರಣ ಅನುಮೋದನೆ.

4. ಸದರಿ ಟೆಂಡರ್‌ನ ಎಲ್–1 ಟೆಂಡರ್‌ದಾರರಾದ R V Rohith Prop. M/s kumar Electrical ರವರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತವಾದ ರೂ.2,99,14,443.00ಗಳ ಟೆಂಡರ್ ಮೊತ್ತವು ಮಂಜೂರಾದ/ಚಾಲ್ತಿದರಗಳಿಗೆ ಹೋಲಿಸಿದಾಗ ಶೇಕಡ:8.57% ಹೆಚ್ಚು ದರಗಳಿಗೆ ಅನುಮೋದನೆ.

5. ಪ್ರಸ್ತುತ ಟೆಂಡರ್ ಅನುಮೋದನೆಯಾದ ನಂತರ, ಕಾರ್ಯಾದೇಶ ನೀಡುವ ಮುನ್ನ ನಿಯಮಾನುಸಾರ ಜಾಬ್‌ಕೋಡ್ ಪಡೆಯಲು ಅನುಮೋದನೆ.

ತೀರ್ಮಾನ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22-03-2022ರ ಟಿಪ್ಪಣಿಯನ್ನು ಓದಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು